ಆದರೆ ರೈತಪರ್ಗದವರ ಮನವಿಯ ಮೇಲೆ ಈ ವಿದ್ಯುತ್ ನಿಲುಗಡೆಯನ್ನು ಒಂದು ದಿನ ಬೆಳಗಿನ ೬ರಿಂದ ಮಧ್ಯಾಹ್ನ ೨ ಘಂಟೆವರೆಗೂ ಮಾರನೇ ದಿನ ಬೆಳಿಗ್ಗೆ ೯ರಿಂದ ಸಾಯಂಕಾಲ ೫ ಘಂಟೆಯವರೆಗೂ ವಿದ್ಯುತ್ ನಿಲುಗಡೆ ಮಾಡುವುದನ್ನು ಜಾರಿಗೆ ತರಲಾಯಿತು. ಆದರೆ ಈ ನಿಲುಗಡೆ ವೇಳೆಯನ್ನು ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಲು ಅವಕಾಶ ಮಾಡಿದ್ದು ಅವಧಿ ೮ ಗಂಟೆಗಳದ್ದಾಗಿರಲೇ ಬೇಕಾಗುತ್ತದೆ. ಆದ್ದರಿಂದ ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ನಿಲುಗಡೆಯನ್ನು ದಿನವಹಿ ಹಗಲು ೮ ಘಂಟೆಗಳ ಕಾಲ, ಬೆಳಿಗ್ಗೆ ೮ರಿಂದ ಮಧ್ಯಾಹ್ನ ೪ ಘಂಟೆ ವರೆಗೆ ಮಾಡಲಾಗುತ್ತಿದೆ.

ಪಟ್ಟಣ ಪ್ರದೇಶಗಳಲ್ಲಿನ ಹೆಚ್ಚು ಕಡಿಮೆ ಎಲ್ಲಾ ಗ್ರಾಹಕರ ಬಳಕೆಯ ಮೇಲೆ ಕಡಿತ ವಿಧಿಸಿದ್ದರೂ, ಇಲ್ಲೂ ದಿನಕ್ಕೆ ೨ ಘಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ. ಮೇಲ್ಕಂಡ ವಿದ್ಯುತ್ ನಿಲುಗಡೆ ಅನಿವಾರ್ಯವಾಗಿರುವುದರಿಂದ ಎಲ್ಲಾ ವರ್ಗದವರ ಸಹಕಾರ ಈ ಕಷ್ಟಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿದೆ.

೨) ಸವದತ್ತಿ ತಾಲ್ಲೂಕು ಮುರುಗೋಡ ಗ್ರಾಮದಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಿಸಲು ಒತ್ತಾಯ.

ಶ್ರೀ ಶಿವಾನಂದ ಹೆಜ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ "ಮುರಗೋಡ" ಗ್ರಾಮದಲ್ಲಿ ಬಸ್ ಸ್ಟ್ಯಾಂಡ್. ಬಿಲ್ಡಿಂಗ್‌ದ ಅವಶ್ಯಕತೆ ಬಹಳೇ ಇದ್ದು. ಕೂಡಲೆ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳಲು ಡಿವಿಜನಲ್ ಕಂಟ್ರೋಲರ್ ಕೆಎಸ್‌ಆರ್‌ಟಿಸಿ ಬೆಳಗಾಂ ಇವರಿಗೆ ಆದೇಶ ನೀಡಬೇಕು. ಮತ್ತು ಕೂಡಲೇ ಅಲ್ಲಿ ಬಸ್ ಸ್ಟ್ಯಾಂಡ್ ಬಿಲ್ಡಿಂಗ್ ಕಟ್ಟಲು ಮ್ಯಾನೇಜಿಂಗ್ ಡೈರೆಕ್ಟರ್. ಕೆಎಸ್‌ಆರ್‌ಟಿಸಿ ಬೆಂಗಳೂರು ಇವರಿಗೆ ಆದೇಶ ನೀಡಬೇಕೆಂದು ಮಾನ್ಯ ಸಾರಿಗೆ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕಿನ ಮುರಗೋಡು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಲು ಈಗ ನಿಗದಿ ವಶದಲ್ಲಿ ಇರುವ ೯ ಗುಂಟೆ ಜಾಗವು ಸಾಕಾಗದೆ ಇರುವುದರಿಂದ ಬೇರೆ ಸುಮಾರು ೬೦ ಗುಂಟೆ ಜಾಗವನ್ನು ಈಗಾಗಲೇ ಗುರುತಿಸಲಾಗಿದೆ. ಅಸಿಸ್ಟೆಂಟ್ ಕಮಿಷನರ್, ಬೈಲಹೊಂಗಲ ಅವರು ೬೦ ಗುಂಟೆ ಜಾಗದ ಬೆಲೆಯನ್ನು ೪೪,೦೦೦ ರೂಪಾಯಿಗಳ ಕಿಮ್ಮತ್ತು ಮಾಡಿರುತ್ತಾರೆ. ಸದರಿ ಸ್ಥಳವು ಹಳ್ಳ ತಗ್ಗುಗಳಿಂದ ಕೂಡಿರುವುದರಿಂದ ಬಸ್ ನಿಲ್ದಾಣವನ್ನು ಕಟ್ಟಲು ಹೆಚ್ಚು ವೆಚ್ಚ ತಗಲುವುದರಿಂದ ಪುನಃ ಸ್ಥಳವನ್ನು ಪರಿಶೀಲಿಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು. ಜಮೀನು ನಮ್ಮ ವಶಕ್ಕೆ ಬಂದ ನಂತರ ಬಸ್ ನಿಲ್ದಾಣವನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು

ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಬಗ್ಗೆ ನನ್ನ ಜೊತೆ ಬಂದು ಮಾತನಾಡಿದ್ದಾರೆ. ಅಲ್ಲಿ ಆದಷ್ಟು ಬೇಗ ಒಂದು ಬಸ್ ನಿಲ್ದಾಣಕ್ಕೆ ಮಂಜೂರಾತಿ ಕೊಡುವುದಕೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ನಾನು ಸೂಚನೆಯನ್ನು ಕೊಡುತ್ತೇನೆ.

೩ ರಾಜ್ಯದಲ್ಲಿ ಗಾಣೋದ್ಯಮ ಮಂಡಳಿಯನ್ನು ಸ್ಥಾಪಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಸುಮಾರು ೧೦ ಲಕ್ಷ ಗಾಣಿಗರಿದ್ದಾರೆ ಅವರ ಮೂಲ ಉದ್ಯೋಗವಾದ ತೈಲ ವೃತ್ತಿಯು ಅವರ ಕೈಯಿಂದ ತಪ್ಪಿಹೋಗಿ ಶೋಚನೀಯ ಸ್ಥಿತಿಯಲ್ಲಿರುತ್ತಾರೆ. ಗಾಣಿಗರಿಗೆ ಕಚ್ಚಾ ಸಾಮಗ್ರಿಗಳಾದ ಎಣ್ಣೆಕಾಳು, ಕೊಬರಿ ಇತ್ಯಾದಿಗಳು ಸುಲಭವಾಗಿ ದೊರಕುವಂತಾಗಬೇಕು. ಅವರ ಅಭಿವೃದ್ಧಿಯ ನೆಲೆಯಲ್ಲಿ ಗಾಣಿಗರೇ ಕೇಳಿಕೊಂಡಂತೆ ಸರಕಾರ ಗಾಣೋದ್ಯಮ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಹಿಂದೆ ಇದ್ದಂತೆ ಹಳ್ಳಿ ಹಳ್ಳಿಗಳಲ್ಲಿ ಈ ಗಂಡಿ ಕೈಗಾರಿಕೆಗೆ ಹೊಸ ಶಕ್ತಿಯನ್ನು ನೀಡಿ ಹಿಂದುಳಿದಿರುವ ಗಾಣಿಗರ ಸಮುದಾಯಕ್ಕೆ ಸಹಕಾರ ನೀಡುವುದು ಉಪಯುಕ್ತವಾಗಿರುತ್ತದೆ. ಈ ಕುರಿತು ಸಣ್ಣ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.